**ಪ್ರಶ್ನೆ:** ನಿನ್ನ ತಂಗಿಯನ್ನು ಆಗಾಗ ಮುದ್ದು ಮಾಡಬೇಕು ಅನ್ನಿಸುವುದಿಲ್ಲವಾ?

ಉತ್ತರ: ಅನ್ನಿಸುತ್ತೆ, ಆದರೆ ಹೆಂಗಸರ ತರಹ ಅದೇನು ಮಕ್ಕಳನ್ನು ಮುದ್ದಾಡ್ತೀಯಾ ಅಂತ ಅಪ್ಪ ಹೇಳುತ್ತಾರೆ ಎಂದು ಸುಮ್ಮನಾಗುತ್ತೇನೆ. ಯಾರೂ ಇಲ್ಲದಿದ್ದಾಗ ಕೆಲವು ಸಾರಿ ಮುದ್ದಿಸುತ್ತೇನೆ.

**ಪ್ರಶ್ನೆ:** ನಿನಗೆ ಬೇಕಾದ ರೀತಿಯಲ್ಲಿ ಇರೋದಕ್ಕೆ ಅಪ್ಪ– ಅಮ್ಮ ಬಿಡದಿದ್ದಾಗ ಏನು ಮಾಡ್ತೀಯಾ?

ಉತ್ತರ: ಕೆಲವೊಮ್ಮೆ ಸಿಟ್ಟು ಬರುತ್ತೆ. ಆದರೆ ಸಿಟ್ಟು ಮಾಡಿದ್ರೆ ಅಪ್ಪ ಹೊಡೀತಾರೆ. ಹಾಗಾಗಿ ಸುಮ್ಮನಾಗ್ತೀನಿ.

ಹೊರನೋಟಕ್ಕೆ ಕಾಣುವ ಅವನ ಭಾವನಾರಹಿತ ಮಾನಸಿಕ ಸ್ಥಿತಿ ಹೇಗೆ ಬಂತು ಎಂದು ತಿಳಿದಿರಬೇಕಲ್ಲವೇ?

## ಭಾವನೆಗಳು ಲಿಂಗಾಧಾರಿತವೇ?

ದುಃಖ, ಬೇಸರ, ಕೋಪ, ಪ್ರೀತಿ, ಸಂತೋಷ, ಆಶ್ಚರ್ಯ.. ಹೀಗೆ ನಾವೆಲ್ಲಾ ಅನುಭವಿಸುವ ಮತ್ತು ವ್ಯಕ್ತಪಡಿಸುವ ಹಲವಾರು ಭಾವನೆಗಳಲ್ಲಿ ಕೆಲವು ಸ್ತ್ರೀಯರಿಗೆ ಮತ್ತು ಕೆಲವು ಪುರುಷರಿಗೆ ಮಾತ್ರ ಮೀಸಲಾಗಿರುತ್ತದೆಯೇ? ಈ ಪ್ರಶ್ನೆ ಮೇಲುನೋಟಕ್ಕೆ ಹಾಸ್ಯಾಸ್ಪದ ಎನ್ನಿಸಬಹುದು. ಆದರೆ ಕೆಳಗಿನ ಸಂದರ್ಭಗಳನ್ನು ನೋಡಿ.

★ ಹೆಣ್ಣುಮಗುವೊಂದು ಸಾರ್ವಜನಿಕವಾಗಿ ಕೂಗಾಡಿದರೆ, ಕೋಪ ತಾಪಗಳನ್ನು ವ್ಯಕ್ತಪಡಿಸಿದರೆ ಅವಳಿಗೆ ಹಾಗೆ ಮಾಡದಂತೆ ಪೋಷಕರು ಉಪದೇಶಿಸುತ್ತಾರೆ. ಸುತ್ತಲಿನ ಜನ ಇವಳು ಇಷ್ಟು ಒರಟಾಗಿ ವರ್ತಿಸುತ್ತಾಳೆ, ಇವಳೆಂತಹ ಹೆಣ್ಣು ಎಂದು ಮೂದಲಿಸುತ್ತಾರೆ.

★ ಗಂಡು ಮಗುವೊಂದು ಜೋರಾಗಿ ಅಳುತ್ತಿದ್ದರೆ, 'ಏ ಅದೇನು ಹುಡುಗೀರ ತರಹ ಅಳ್ತೀಯಾ' ಎಂದು ಸಾಕಷ್ಟು ಸಾರಿ ಹಂಗಿಸುತ್ತೇವೆ.

★ ಹುಡುಗಿ ಎಲ್ಲರೆದುರು ಜೋರಾಗಿ ನಗುನಗುತ್ತಾ ಮಾತನಾಡಿದರೆ ಮತ್ತು ಹುಡುಗರ ಜೊತೆ ಬೆರೆತರೆ ಗಂಡುಬೀರಿ ಎನ್ನಿಸಿಕೊಳ್ಳುತ್ತಾಳೆ.

★ ಕತ್ತಲು, ನಾಯಿ, ಬೆಕ್ಕಿನಂತಹ ಪ್ರಾಣಿಗಳು, ಆಟೋಟಗಳು ಮುಂತಾದವುಗಳಿಗೆ ಹೆದರುವ ಗಂಡುಮಗು ಹೆಣ್ಣಿಗ ಎನ್ನುವ ಹೆಸರು ಪಡೆಯುತ್ತಾನೆ.

## ಭಾಷೆಯಲ್ಲೂ ಲಿಂಗಭೇದ!

ಲಿಂಗಭೇದವನ್ನು ತೋರಿಸುವ ಶಬ್ದಭಂಡಾರವೇ ಭಾಷೆಯಲ್ಲೂ ಸೇರಿಕೊಂಡಿದೆ. ನಾವು ದಿನನಿತ್ಯ ಉಪಯೋಗಿಸುವ ಕೆಲವು ಶಬ್ದಗಳು ಮತ್ತು ಕನ್ನಡ ಸಾಹಿತ್ಯ ಪರಿಷತ್‌ನಿಂದ ಪ್ರಕಟವಾದ ನಿಘಂಟಿನ ಪ್ರಕಾರ ಅವುಗಳ ಅರ್ಥವನ್ನು ನೋಡಿ.

ಹೆಣ್ಣಿಗ = ಹೇಡಿ, ಅಂಜುಬುರುಕ, ನಪುಂಸಕ

ಹೆಂಗರುಳು= ಹೆಣ್ಣಿನ ಮನಸ್ಸು ಅಂದರೆ ಮೃದುಹೃದಯ

ಸ್ತ್ರೀತ್ವ= ಹೆಣ್ಣುತನ

ಗಂಡುಬೀರಿ= ಗಂಡಸಿನಂತೆ ವರ್ತಿಸುವವಳು, ದಿಟ್ಟತನದ ಹೆಣ್ಣು

ಗಂಡುಗಲಿ= ಪರಾಕ್ರಮಿ ಶೂರ

ಹೀಗೆ ಗಂಡು ಅಥವಾ ಪುರುಷ ಎನ್ನುವ ಶಬ್ದವನ್ನು ಧೈರ್ಯ, ಶೌರ್ಯ, ಪರಾಕ್ರಮಗಳಿಗೂ ಮತ್ತು ಹೆಣ್ಣು ಅಥವಾ ಸ್ತ್ರೀ ಎನ್ನುವ ಶಬ್ದವನ್ನು ನಾಜೂಕು, ದೌರ್ಬಲ್ಯಗಳಿಗೂ ಸಮೀಕರಿಸುವ ಶಬ್ದಗಳು ಸಾಕಷ್ಟು ಸಿಗುತ್ತವೆ. ಅತಿರೇಕವೆಂದರೆ ಗಂಡು ಎನ್ನುವ ಶಬ್ದದ ಒಂದು ಅರ್ಥ ಯಶಸ್ವಿಯಾದುದು, ಫಲಪ್ರದವಾದದು ಎಂದು! ಅಂದರೆ ಹೆಣ್ಣು ಎನ್ನುವುದು ಸೋಲು ಫಲಹೀನತೆಯ ಸೂಚನೆಯೇ? ಗಂಡು ಮೆಟ್ಟಿದ ನೆಲ ಎನ್ನುವುದು, ಶೂರರ ನಾಡು ಎಂದಾದರೆ ಚೆನ್ನಮ್ಮನ ಕಿತ್ತೂರನ್ನೋ ಲಕ್ಷ್ಮೀಬಾಯಿಯ ಝಾನ್ಸಿಯನ್ನೋ ಓಬವ್ವನ ಚಿತ್ರದುರ್ಗವನ್ನೋ ಏನೆಂದು ಕರೆಯುತ್ತೀರಿ?

ಇದೇ ರೀತಿಯ ಲಿಂಗಭೇದದ ಶಬ್ದಗಳು ಇತರ ಭಾಷೆಗಳಲ್ಲೂ ಇರಲೇಬೇಕು. ನಮ್ಮ ಭಾಷಾತಜ್ಞರು ಇಷ್ಟೊತ್ತಿಗಾಗಲೇ... ಇಷ್ಟೊತ್ತಿಗಾದರೂ

